ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:29 - 5 -2020ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/752/2019-20

ವಿಷಯ :- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯಲಹಂಕ ವಲಯದ ವ್ಯಾಪ್ತಿಯಲ್ಲಿ ವಾರ್ಡ್ ಸಂಖ್ಯೆ:04 ಕ್ಕೆ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3521 ರ ಅಡಿಯಲ್ಲಿ ಕಾಮಗಾರಿಯಾದ Asphalting and improvements to roads and drains at A sector, B sector, Judicial layout, Someshwara Nagara in Ward No.04 of Yelahanka Satellite Town Sub Division ರ ಟೆಂಡರ್ ಅನುಮೋದನೆಯ ಬಗ್ಗೆ.

ಉಲ್ಲೇಖ :- 1. ಮಾನ್ಯ ಆಯುಕ್ತರು ರವರ ಕಛೇರಿ ಆದೇಶದ ಸಂಖ್ಯೆ:ಪಿಎಸ್‌ಆರ್(ಜ)/8835/2019-20, ದಿನಾಂಕ:11/03/2020.

--*-*-*-*

ಮೇಲ್ಕಾಣಿಸಿದ ಯಲಹಂಕ ವಲಯದ ವ್ಯಾಪ್ತಿಯಲ್ಲಿ 2018-19ನೇ ಸಾಲಿನ ಪಾಲಿಕೆ ಆಯವ್ಯದ ಲೆಕ್ಕ ಶೀರ್ಷಿಕೆ ಪಿ-3521 ರ ಅಡಿಯಲ್ಲಿ ವಾರ್ಡ್ ಸಂಖ್ಯೆ:04 ರಲ್ಲಿನ ಕಾಮಗಾರಿಯ ಒಟ್ಟು ಅಂದಾಜು ಮೊತ್ತವಾದ ರೂ.300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೊದನೆ ನಿರಿಕ್ಷಿಸಿ, ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಸದರಿ ಪ್ಯಾಕೇಜ್ ಕಾಮಗಾರಿಯಾದ Asphalting and improvements to roads and drains at A sector, B sector, Judicial layout, Someshwara Nagara in Ward No.04 of Yelahanka Satellite Town Sub Division ಟೆಂಡರ್ ಕರೆದಿದ್ದು, ದಿನಾಂಕ:08/02/2019 ರಂದು (1ನೇ ಕರೆ) ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

SL No	Name of Work	Estimated Cost (Rs in Lakhs)	Job Code
1	Asphalting and improvements to roads and drains at A sector, B sector, Judicial layout, Someshwara Nagara in Ward No.04 of Yelahanka Satellite Town Sub Division	300.00	004-19-000045
	TOTAL	300.00	

1.	Estimated Cost	:: Rs. 300.00 Lakhs
2.	Amount put to Tender	:: Rs. 2,65,48,477.32
3.	SR. Adopted	:: 2018-19
4.	Job Code	:: 004-19-000045
5.	Indent Number	:: 34205
6.	Category	:: Special Development Works
7.	Budget Head	:: P-3521 (Developmental works at ward)
8.	No of Bidders	:: 02
9.	Technical Evaluation Details	:: Approved by CE (Yelahanka) in para (45)
10.	Financial Bid Details	:: Opened On:26/02/2019

ಸದರಿ ಟೆಂಡರ್‌ನಲ್ಲಿ ಗುತ್ತಿಗೆದಾರರಾದ ಶ್ರೀ.ಬಿ.ಎಂ.ಚಂದ್ರಯ್ಯ ಮತ್ತು ಶ್ರೀ.ಎಂ.ಎಸ್.ವೆಂಕಟೇಶ್ M Construction Company ರವರು ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರು ಅರ್ಹ ದಾಖಲಾತಿಗಳನ್ನು ಸಲ್ಲಿ ಬಿಡ್‌ನಲ್ಲಿ ಅರ್ಹರಾಗಿರುತ್ತಾರೆ, ತಾಂತ್ರಿಕ ಬಿಡ್ ಅನ್ನು ಮುಖ್ಯ ಅಭಿಯಂತರು (ಯಲಹಂಕ ವಲಯ) ಅನುಮೋದಿಸಿದ್ದು, ತದನಂತರ ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಆರ್ಥಿಕ ಬಿ ತೆರೆಯಲಾಗಿದ್ದು, ಸದರಿ ಗುತ್ತಿಗೆದಾರರುಗಳ ಆರ್ಥಿಕ ಬಿಡ್‌ನ ವಿವರಗಳು ಈ ಕೆಳಕಂಡಂತಿರುತ್ತದೆ.

SL No	Name of Contractor	Amount put to Tender in Rs	Tendered / Bid Amount in Rs	% of Tender w.r.t S.R.2018-19	% of Negotiation
1	ಶ್ರೀ.ಎಂ.ಎಸ್.ವೆಂಕಟೇಶ್ M/s.MSV Construction Company	2,65,48,477.32	3,37,16,539.00	27.00% Above	14.99% Above
2	ಶ್ರೀ.ಬಿ.ಎಂ.ಚಂದ್ರಯ್ಯ		3,50,43,982.56	32.00% Above	

ಸದರಿ ಟೆಂಡರ್‌ನ ಕನಿಷ್ಠ ಗುತ್ತಿಗೆದಾರರಾದ ಶ್ರೀ.ಎಂ.ಎಸ್.ವೆಂಕಟೇಶ್ ರವರು ಟೆಂಡರ್‌ನಲ್ಲಿ ನಮೂದಿಸಿದ ಟೆಂಡರ ಮೊತ್ತವಾದ ರೂ.3,37,16,539.00 ಗಳನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.2,65,48,477.32 ಗಳಿಗೆ 2018-19ನೇ ಸಾಲಿನ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.27.00% ರಷ್ಟು ಹೆಚ್ಚುವರಿ ದರಗಳು ಕಂಡು ಬಂದಿದ್ದು, ಗುತ್ತಿಗೆದಾರರು ನಮೂದಿಸಿರುವ ಟೆಂಡರ್‌ನಲ್ಲಿ ನಮೂದಿಸಿದ ದರಗಳು ಹೆಚ್ಚುವರಿ ಇರುವುದನ್ನು ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರು ಗಮನಿಸಿ, ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿದ ಶೇ.27.00% ರಷ್ಟು ಹೆಚ್ಚುವರಿ ದರಗಳಿಂದ ಶೇ.14.99% ರಷ್ಟು ಹೆಚ್ಚುವರಿ ದರಗಳಿಗೆ ಕಡಿಮೆ ಮಾಡಿ ಸಂಧಾನ ಪತ್ರ ನೀಡಿದ್ದು ಹಾಗು ಸದರಿ ಸಂಧಾನಿತ ಶೇಕಡವಾರುವಿಗೆ ಸಂಧಾನಿತ ಟೆಂಡರ್ ಮೊತ್ತವಾದ ರೂ.3,05,28,094.07 ಗಳಿಗೆ ಒಪ್ಪಿಗೆ ನೀಡಿ ಟೆಂಡರ್ ಅನುಮೋದಿಸಲು ಹಾಗೂ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ. ಮುಖ್ಯ ಅಭಿಯಂತರರು (ಯಲಹಂಕ ವಲಯ) ರವರು ಟೆಂಡರ್ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಗುತ್ತಿಗೆದಾರರು ನಮೂದಿಸಿರುವ ಟೆಂಡರ್‌ನಲ್ಲಿ ನಮೂದಿಸಿದ ದರಗಳು ಹೆಚ್ಚುವರಿ ಇರುವುದನ್ನು ಮಾನ್ಯ ಆಯುಕ್ತರು ರವರು ಗಮನಿಸಿ, ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಲು ಆದೇಶಿಸಿದ್ದು, ಅದರಂತೆ ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ) ರವರ ಕಛೇರಿಯಲ್ಲಿ ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿದ ಸಂಧಾನಿತ ಶೇ.14.99% ರಷ್ಟು ಹೆಚ್ಚುವರಿ ದರಗಳಿಂದ ಶೇ.5.00% ರಷ್ಟು ಹೆಚ್ಚುವರಿ ದರಗಳಿಗೆ ಕಡಿಮೆ ಮಾಡಿ ಸಂಧಾನ ಪತ್ರ ನೀಡಿದ್ದು (ದಿನಾಂಕ:03/01/2020 ರಂದು ಹೊರಡಿಸಿದ ಪರಿಷ್ಕೃತ ದರಗಳಿಗೆ ಪರಿಗಣಿಸಿ ಹೋಲಿಸಿದಾಗ ಶೇ.5.20% ರಷ್ಟು ಹೆಚ್ಚುವರಿ ದರಗಳು) ಹಾಗು ಸದರಿ ಸಂಧಾನಿತ ಶೇಕಡವಾರುವಿಗೆ ಸಂಧಾನಿತ ಟೆಂಡರ್ ಮೊತ್ತವಾದ ರೂ.2,78,75,901.00 ಗಳಿಗೆ ಒಪ್ಪಿಗೆ ನೀಡಿ ಟೆಂಡರ್ ಅನುಮೋದಿಸಲು ಕೋರಿರುತ್ತಾರೆ. ಮಾನ್ಯ ಆಯುಕ್ತರು ರವರು ಶೇ.4.99% ರಷ್ಟು ಹೆಚ್ಚುವರಿ ದರಗಳಿಗೆ ಅನುಮೋದಿಸಿರುತ್ತಾರೆ. ಅಧಿಕಾರ ಪ್ರತ್ಯಾಯೋಜನೆಯಂತೆ ಅನುಮೋದಿಸುವ ಸೂಕ್ತ ಪ್ರಾಧಿಕಾರವು ಮಾನ್ಯ ಆಯುಕ್ತರು / ವಾರ್ಡ್ ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿ ಸಭೆಯ ಮುಂದೆ ಇದ್ದು, ಅನುಮೋದನೆ ಕೋರಿ ಟಿಪ್ಪಣಿಯೊಂದಿಗೆ ಮಂಡಿಸಲು ಮೇಲ್ಕಂಡ ಉಲ್ಲೇಖ ರಡಿಯಲ್ಲಿ ಮಾನ್ಯ ಆಯುಕ್ತರು ರವರು ಒಪ್ಪಿಗೆ ನೀಡಿರುತ್ತಾರೆ.

SL No	Name of Contractor	Tendered / Bid Amount in Rs	Re-Negotiated Amount in Rs	Re-Negotiated Rates w.r.t SR-2018-19
1	ಶ್ರೀ.ಎಂ.ಎಸ್.ವೆಂಕಟೇಶ್ M/s.MSV Construction Company	3,37,16,539.00	2,78,73,246.34	4.99% Above

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್‌ನ ಕನಿಷ್ಠ ಗುತ್ತಿಗೆದಾರರಾದ ಶ್ರೀ.ಎಂ.ಎಸ್.ವೆಂಕಟೇಶ್ (ಎಂ.ಎಸ್.ಕನ್ಸ್ಟ್ರಕ್ಷನ್ ಕಂಪನಿ), ರವರು ಟೆಂಡರ್‌ನಲ್ಲಿ ನಮೂದಿಸಿದ ದರ ಸಂಧಾನಿತ ಟೆಂಡರ್ ಮೊತ್ತವಾದ ರೂ.2,78,73,246.34 ಗಳನ್ನು 2018–19ನೇ ಸಾಲಿನ ದರಪಟ್ಟಿಗೆ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.4.99% ರಷ್ಟು ಹೆಚ್ಚುವರಿ ಹೆಚ್ಚುವರಿ ದರಗಳ ಟೆಂಡರ್ ಅನುಮೋದನೆಗೆ ಸೂಕ್ತ ತೀರ್ಮಾನ ಹಾಗೂ ಮೇಲ್ಕಾಣಿಸಿದಂತೆ ಸದರಿ ಪ್ಯಾಕೇಜ್ ಕಾಮಗಾರಿಯ ಅಂದಾಜು ಮೊತ್ತವಾದ ರೂ:300.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೊದನೆ ನೀಡಲು ಹಾಗೂ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜ) 8835/2019–20, ದಿನಾಂಕ:11–03–2020 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರರ ಕಛೇರಿ ಸಂಖ್ಯೆ:7210/2019–20, ದಿನಾಂಕ:13–03–2020 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರವರ ದಿನಾಂಕ:17–03–2020 ರ ಟಿಪ್ಪಣಿ.

ನಿರ್ಣಯ: ಪ್ರಧಾನ ಅಭಿಯಂತರರವರ ದಿ:17-03-20ರ ಟಿಪ್ಪಣಿಯನ್ನು ಒಪ್ಪಿದೆ, ಕೋವಿಡ್-19 ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಜಾಬ್ ಸಂಖ್ಯೆಯು ಫ್ರೀಜ್ ಆಗುವ ಅವಕಾಶ ಇರುವುದರಿಂದ ಡಿ-ಫ್ರೀಜ್ ಮಾಡುವ ಬಗ್ಗೆ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಮಿತಿ ತೀರ್ಮಾನಿಸಿತು.

ಅಧ್ಯಕ್ಷರು
[illegible] ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರ ಸಂ	ಶ್ರೀಯುತರ ಹೆಸರು	ಪದನಾಮ	
1	ಜಿ.ಕೆ.ವೆಂಕಟೇಶ್ (ಎನ್.ಟಿ.ಆರ್)	ಅಧ್ಯಕ್ಷರು	
2	ಎನ್.ಶಾಂತಕುಮಾರಿ	ಸದಸ್ಯರು	
3	ಗುರುಮೂರ್ತಿ ರೆಡ್ಡಿ	ಸದಸ್ಯರು	
4	ಮಹದೇವ.ಎಂ.	ಸದಸ್ಯರು	
5	ಗಾಯಿತ್ರಿ.ಎಂ.	ಸದಸ್ಯರು	
6	ಐಶ್ವರ್ಯ.ಬಿ.ಎನ್.	ಸದಸ್ಯರು	Aishwarya.
7	ಮಂಜುಳ ವಿಜಯಕುಮಾರ್	ಸದಸ್ಯರು	
8	ರಾಧಮ್ಮ ವೆಂಕಟೇಶ್	ಸದಸ್ಯರು	
9	ನೌಶೀರ್ ಅಹ್ಮದ್	ಸದಸ್ಯರು	
10	ನಳಿನಿ.ಎಂ.ಮಂಜು	ಸದಸ್ಯರು	Nalini m. manju
11	ಸವಿತ.ವಿ.ಕೃಷ್ಣ	ಸದಸ್ಯರು	